near Hunasehalli village in Sira Taluk is under consideration. About 5000 acres of land would be irrigated by this project and irrigation facility would be ensured for the Achcut coming under Dharmapur and Shravanagere tanks in Hiriyur taluk.

(b) About 383-50 lakhs of rupees.

(c) Not required. Categorisation of this project as a minor irrigation project is before the Government.

(d) About 369 acres of land would be submerged this project.

(e) No part of Sira taluk would be irrigated by this project.

Government Silk Farm in Mandya Taluk

382 SRI M. S. ATMANANDA (Mandya) Will the Minister of State for Youth Services and Sericulture be pleased to state :—

(a) whether establishment of Government Silk Farm in Mandy taluk is under consideration of Government ;

(b) if so, the place at which this farm would be started ;

(c) the extent of land acquired for this purpose ?

SMT RENUKA RAJENDRAN (Minister of State for Youth Services and Sericulture):—

(a) Yes.

(b) There is a proposal for establishment of a silk farm in 104 acres and 18 guntas of land in Malligere and Setanur villages of Mandya taluk under the World Bank scheme.

(c) In survey No. of Malligere village	...	100 acres
In survey No. of Sathanur village	...	4.18 acres
Total	...	104.18 acres

CALLING ATTENTION TO A MATTER OF URGENT PUBLIC IMPORTANCE

re : Hardship caused to the Poor and Harijan in getting admission in Private Schools and Colleges.

SRI P. RAMDEV. (Malleswara).—I call the the attention of the Minister for Education to the hardships caused to the poor and Harijans in getting admissions in private schools and colleges due to

collection of donations against the recent Government Circular. ಈ ಸ್ಥಿತಿಯಲ್ಲಿದ್ದರೂ ಸಹ ಹಲವಾರು ಶಾಲಾ ಕಾಲೇಜುಗಳು ಸುಲಿಗೆಯನ್ನು ಮಾಡತಕ್ಕಂಥ ವಿಚಾರದಲ್ಲಿ ಪ್ರಾದೇಶಿಕ ತಾರತಮ್ಯವನ್ನು ಮಾಡುತ್ತಿರುವುದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುಬಯಸುತ್ತೇನೆ.

SRI G. B. SHANKER RAO. (Minister for Education):—Sir, I beg to make the following statement.

It was brought to the notice of Government that some managements of private Educational Institutions are demanding donations from the parents who seek admissions for their children in pre-primary, primary and Secondary Schools and Junior Colleges. It was also learnt that only those who can afford to pay donations are given preference andadmissions to others are rejected under theguise oftest etc, This is contrary to therules of Government and so Government wanted to deal with such malpractices firmly. Therefore Government issued a Circular in No. ED 114 SLB 80 dated 23rd May 1980 instructing all the Unit Offices in the Education Department to take steps to prevent such malpractices.

The following instructions have been issued in the Circular.

i) The Managements should notify the dates of issue of applications and the last date for receipt of applications ;

ii) They should admit the candidates on seniority of their applications on first come first served basis irrespective of caste creed etc., as stripulated in Government Order No. ED 61 TGL 79 dated 2nd June 1979 regarding reservation of seats to S.C/S.T etc.,

iii) Various rules of Grant-in-aid Code in respect of fees, donations collected by the Management and the School and other regulations in the said code shall be strictly followed by the Managements/Schools aided and un-aided.

It has also been made clear in the Circular that the managements which resort to malpractices in contravention of the instructions, do so, at the pain of derecognition of their institutions.

The rush for admissions is prevalent in some unaided prestigeou Institutions where the intake capacity is limited. Instructions have been issued to local Officers to see that all students seeking admission are accommodated in one Institution or another.

The above said circular has been issued only a month ago and it has been communicated to all the unit offices and in turn to the managements coming under their control. No specific case of collec-

tion of donations have come to the notice of Government. However, if any specific case is reported to Government suitable action as per rules will be taken against the erring educational Institutions.

† ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ವಿದ್ಯಾ ಸಂಸ್ಥೆಗಳಲ್ಲಿ ಆಗುತ್ತಿರುವ ಹಣದ ಸಂಲಿಗೆಯನ್ನು ತಡೆಗಟ್ಟಬೇಕೆಂಬ ಉದ್ದೇಶವನ್ನು ಗಮನಕ್ಕೆ ತೆಗೆದುಕೊಂಡು ನಮ್ಮ ಮಾನ್ಯ ವಿದ್ಯಾ ಸಚಿವರು ಸೂಕ್ತ ಕ್ರಮವನ್ನು ಕೈಗೊಳ್ಳಲು ಪ್ರಯತ್ನ ಮಾಡಿರುವುದಕ್ಕೆ ನಾನು ಕೃತಜ್ಞನಾಗಿದ್ದೇನೆ ಮಾನ್ಯ ಸಚಿವರೇನೋ ಈಗ್ಗೆ ಒಂದು ತಿಂಗಳ ಕೆಳಗೆ ಒಂದು ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದಾರೆ. ಆದರೆ ಯಾರೂ ಕೂಡು ಅದನ್ನು ಅನುಸರಿಲ್ಲ. ತಮ್ಮ ಹೇಳಿಕೆಯಲ್ಲಿ "The Circular is followed more in the violation rather than actual implementation." ಎಂದು ಹೇಳಿದ್ದೀರಿ. May I know, whether any of such specific cases of collection have come to the notice of the Govt. ? ಈ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ. ನಿನ್ನೆಯ ದಿವಸದ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಎಡಿಟೋರಿಯಲ್ ಕಾಲಂನಲ್ಲಿ ಬರೆದಿರುವ ವಿಚಾರವನ್ನು ನೋಡಿದರೆ ತಮಗೆ ಎಲ್ಲವೂ ಗೊತ್ತಾಗುತ್ತದೆ. ವಿದ್ಯಾ ಸಂಸ್ಥೆಗಳಲ್ಲಿ ಆಗುತ್ತಿರವನ್ನು ವ್ಯಾಪಾರವನ್ನು ನಿಲ್ಲಿಸುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ರೀತಿ ಮಕ್ಕಳ ತಂದೆತಾಯಿಗಳಿಗೆ ಆಗುತ್ತಿರುವ ಸುಲಿಗೆಯನ್ನು ತಾವು ನಿಲ್ಲಿಸಬೇಕು. ನಿಮ್ಮ ಕೈಯಲ್ಲಿ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗದಿದ್ದರೆ ತಮಗೆ ನನ್ನ ಒಂದೇ ಒಂದು ಸಲಹೆ ಎಂದರೆ, ಯಾವ ಯಾವ ಸ್ಕೂಲು, ಕಾಲೇಜುಗಳಲ್ಲಿ ಡೊನೇಷನ್ ತೆಗೆದುಕೊಳ್ಳುತ್ತಾರೆ ಎಂಬುದನ್ನು ಪತ್ತೆ ಹಚ್ಚಿ ನೀವೇ ಇದನ್ನು ನಿಲ್ಲಿಸಿ ಎಂದು ವಿದ್ಯಾರ್ಥಿಗಳಿಗೇ ಕರೆ ಕೊಡಿ. ಆಗ ವಿದ್ಯಾರ್ಥಿಗಳು ಬಹಳ ಸುಲಭವಾಗಿ ಇದನ್ನು ನಿಲ್ಲಿಸುತ್ತಾರೆ. ಸ್ವಾಮಿ, ತಮಗೆ ಉದಾಹರಣೆಗೆ ಹೇಳಬೇಕೆಂದರೆ, ನರ್ಸರಿ ಶಾಲೆಗಳಲ್ಲಿ, ಆರ್ಟಿನ್ ಸೆಂಟರ್‌ಗಳಲ್ಲಿ ಒಂದೊಂದು ಮಗುವಿಗೂ ಆಡ್ಮಿಷನ್ ತೆಗೆದುಕೊಳ್ಳಲು ೫ ಸಾವಿರ ರೂಪಾಯಿ ಡೊನೇಷನ್ ಕೇಳುತ್ತಿದ್ದಾರೆ. ಇದಕ್ಕೆ ಆವರು ರಸೀತಿ ಕೂಡ ಕೊಡುವುದಿಲ್ಲ. ಮಕ್ಕಳು ಹುಟ್ಟುವ ೨-೩ ವರ್ಷ ಮುಂಚೆಯೇ ಈ ಶಾಲೆಗಳಿಗೆ ಸಾವಿರಾರು ರೂಪಾಯಿ ಡೊನೇಷನ್ ಕೊಟ್ಟು ಸ್ಥಳವನ್ನು ಕಾದಿರಿಸಬೇಕಂತೆ. ನಮಗೆ ಮಕ್ಕಳು ಇಷ್ಟು ವರ್ಷಕ್ಕೇ ಹುಟ್ಟುತ್ತವೆಂದು ಯಾರಿಗೆ ಗೊತ್ತಿರುತ್ತದೆ. ಉದಾಹರಣೆಗೆ ಹೇಳಬೇಕಾದರೆ ನ್ಯೆಲ್ಲಾ ಮೇರಿ ಸ್ಕೂಲ್‌ನಲ್ಲಿ ನನ್ನ ತಮ್ಮನ ಮಗುವಿಗೆ ಸೀಟು ಸಿಕ್ಕಲಿಲ್ಲ. ನಾವು ಹೋಗಿ ಕೇಳಿದರೆ ೨-೩ ವರ್ಷ ಮೊದಲೇ ಸೀಟನ್ನು ರಿಸರ್ವ್ ಮಾಡಿಸಬೇಕಾಗಿತ್ತು ಎಂದು ಹೇಳಿದರು. ಮುಂದೆ ಹುಟ್ಟುವ ಮಗುವಿಗೆ ೨-೩ ವರ್ಷ ಮುಂಚಿತವಾಗಿ ಸೀಟು ಕಾದಿರಿಸುವುದಕ್ಕೆ ಸಾಧ್ಯವೆ ಎಂಬುದನ್ನು ತಾವು ಯೋಜನೆ ಮಾಡಬೇಕು.

ಮಾನ್ಯ ಅಧ್ಯಕ್ಷರೆ, ಇದೊಂದೇ ಸ್ಕೂಲ್ ಆಲ್ಲ, ತಮಗೆ ಹೇಳಬೇಕೆಂದರೆ, ಆರ್.ವಿ.ಟಿ. ಕಾಲೇಜ್, ಬಿ ಎಂ.ಎಸ್., ಇಂಜನಿಯರಿಂಗ್ ಕಾಲೇಜು ಇನ್ನೂ ಮುಂತಾದುವುಗಳಲ್ಲಿ ಒಂದೊಂದು ಸೀಟಿಗೆ ೨೦ ಸಾವಿರಕ್ಕೆ ಕಡಿಮೆ ಮಂಟ್ಟುವುದಿಲ್ಲ. ಲಾ ಕಾಲೇಜುಗಳಲ್ಲಿ ೧-೨ ಸಾವಿರಕ್ಕೆ ಕೆಡಿದು ತಗೆದುಕೊಳ್ಳುವುದಿಲ್ಲ. ಡಿಗ್ರಿ ಕಾಲೇಜುಗಳಲ್ಲಿ ೨-೩ ಸಾವಿರ ರೂಪಾಯಿ, ಫಾರ್ಮಸಿಯಲ್ಲಿ ೭-೮ ಸಾವಿರ ರೂಪಾಯಿ, ಪಾಲಿಟೆಕ್ನಿಕ್‌ನಲ್ಲಿ ೫-೬ ಸಾವಿರ ರೂಪಾಯಿ, ಹೀಗೆ ಎಲ್ಲಗೆ ಹೋದರೂ ಸಾವಿರಗಟ್ಟಲೆ ಡೊನೇಷನ್ ಕೇಳುತ್ತಾರೆ. ಸ್ವಾಮಿ, ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಈ ಸರ್ಕಾರ ಕಣ್ಣಿದ್ದರೂ ಕುರುಡಾಗಿದೆ. ಇವತ್ತು ಮಕ್ಕಳ ತಂದೆತಾಯಿಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕಾದರೆ ಈ ವಿಚಾರವನ್ನು ಸಿ.ಒ.ಡಿ. ನವರಿಗೆ ಒಪ್ಪಿಸಿ ಅವರಿಂದ ಒಂದು ವರ ಯನ್ನು ತರಿಸಿಕೊಂಡರೆ ಮುಂದಿನ ಕ್ರಮ ತೆಗೆದುಕೊಳ್ಳಿ. ನಾವು ಈ ವಿಚಾರವನ್ನು ಪದೇ ಪದೇ ಇಲ್ಲಿ ಹೇಳುತ್ತಿದ್ದರೂ ತಾವು, ತಮ್ಮ ಅಸಹಾಯಕತೆಯನ್ನು ತೋರಿಸುತ್ತಿದ್ದೀರಿ. ಇದು ಖಂಡಿತವಾಗಿ ಒಳ್ಳೆಯದಲ್ಲ. ತಮಗೆ ನಾನು ಒಂದು ಸಲಹೆಯನ್ನು ಕೊಡಬಯಸುವುದೇನೆಂದರೆ, ಸೆಕೆಂಡರಿ ಎಕ್ಸಾಮಿನೇಷನ್ ಬೋರ್ಡ್‌ಪಿ.ಯು.ಸಿ ಬೋರ್ಡ್ ಎಂದು ಇರುವಂತೆ ಇದಕ್ಕೂ ಒಂದು ಬೋರ್ಡ್ ಮಾಡಿ ಈ ಹುಡುಗರ ಅಡ್ಮಿಷನ್‌ನ್ನು ಅಲ್ಲಿಯೇ ಮಾಡುವಂತೆ ವ್ಯವಸ್ಥೆ ಮಾಡಿದರೆ ನಿಮಗೂ ಕೂಡ ಬಹಳ ಅನುಕೂಲವಾಗುತ್ತದೆ ಅಲ್ಲದೆ ವಿದ್ಯಾರ್ಥಿಗಳ ಪೋಷಕರಿಗೂ ಅನುಕೂಲವಾಗುತ್ತದೆ. ಹರಿಜನ ಮಕ್ಕಳಿಗೆ, ಹಿಂದುಳಿದ ವರ್ಗದ ಮಕ್ಕಳಿಗೆ, ಬಡವರ ಮಕ್ಕಳಿಗೆ ಯಾವ ಕಾರ್ಪೊರೇಷನ್ ಶಾಲೆಗಳಲ್ಲಾಗಲಿ, ಸರ್ಕಾರೀ ಶಾಲೆಗಳಲ್ಲಾಗಲಿ ಸೀಟುಗಳು ಸಿಕ್ಕುತ್ತಿಲ್ಲ.

ತಾವು ಇಲ್ಲಿ "the instructions have been issued to local officers to see that all students seeking admission are accommodated in one Institution or another" ಎಂದು ಹೇಳಿದ್ದೀರಿ ನಾನು ತಮ್ಮನ್ನು ಕೇಳುತ್ತೇನೆ. ಎಲ್ಲಯೂ ಸೀಟು ಸಕ್ಕದೇ ತಮ್ಮ ಹತ್ತಿರಕ್ಕೆ ಸಹಾಯಕ್ಕಾಗಿ ಬಂದಿರತಕ್ಕ ಎಲ್ಲ ಮಕ್ಕಳಿಗೂ ಸೀಟುಗಳನ್ನು ಕೊಡಿಸುವ ಭರವಸೆಯನ್ನು ಕೊಡುತ್ತೀರಾ ? ಇದನ್ನು ತಾವು ಸಭೆಗೆ ಹೇಳಬೇಕು.

ಇನ್ನು ಕೊನೆಯದಾಗಿ ಒಂದು ಮಾತು ತಮ್ಮನ್ನು ಕೇಳುವುದೇನೆಂದರೆ ಸ್ಕೂಲ್‌ಗಳಲ್ಲಿ ಕ್ಯಾಪಿಟೇಷನ್ ಫೀಸನ್ನು ಜಾಸ್ತಿ ಮಾಡಿದ ಬಗ್ಗೆ ಕೇಂದ್ರ ಸರ್ಕಾರದವರು ತಮ್ಮನ್ನು ಕಾರಣ ನೀಡುವಂತೆ ಕೇಳಿದ್ದಾರೆಂದು ತಿಳಿದು ಬಂದಿದೆ, ಇದರ ಬಗ್ಗೆ ತಾವು ಸದನಕ್ಕೆ ಉತ್ತರ ನೀಡಬೇಕು.

MR. SPEAKER.—Are you a signatory ?

(ಶ್ರೀ ಎ.ಲಕ್ಷ್ಮೀಸಾಗರ್.—ಸ್ವಾಮಿ, ಬೆಂಗಳೂರಿನಲ್ಲಿರುವ ನಮ್ಮಂಥ ಶಾಸಕರ ಕಷ್ಟ ಏನೆಂಬುದನ್ನು ತಮಗೆ ಹೇಳಬೇಕೆದಿಂದ್ದೇನೆ. ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ, ಕೊಡದೇ ಹೋದರೆ ಸುಮ್ಮನಿರುತ್ತೇನೆ.

ಅಧ್ಯಕ್ಷರು.—ಈ ರೀತಿಯ ತೊಂದರೆ ಬೆಂಗಳೂರು ನಗರದಲ್ಲಿ ಮಾತ್ರವಲ್ಲ. ರಾಜ್ಯದ ಎಲ್ಲ ಕಡೆ ಗಳಲ್ಲೂ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಅದರಲ್ಲೂ ಬೆಂಗಳೂರಿನಲ್ಲಿರತಕ್ಕ ಮಕ್ಕಳ ತಂದೆತಾಯಿಗಳು ತಮ್ಮ ಮಕ್ಕಳಿಗೆ ಸ್ಕೂಲು, ಕಾಲೇಜುಗಳಲ್ಲಿ ಸೀಟು ಕೊಡಿಸಬೇಕೆಂದು ಪ್ರತಿದಿವಸ ನಮ್ಮ ಮನೆಗಳ ಹತ್ತಿರ ಬಂದು ನಮಗೆ ನಿದ್ದೆ ಮಾಡುವುದಕ್ಕೂ ಅವಕಾಶ ಕೊಡದೆ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ನನಗೆ ಈ ಬಗ್ಗೆ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಹೇಗೂ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ, ಅದೇನು ಹೇಳಬೇಕೆಂದಿದ್ದಿರೋ ಅದನ್ನು ಚಿಕ್ಕದಾಗಿ ಹೇಳಿ ಮುಗಿಸಿಬಿಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಸೀಟುಗಳನ್ನು ಕೊಡಿಸಿ ಶಾಸಕರಿಗೆ ಮತ್ತು ಮಕ್ಕಳ ತಾಯಿ ತಂದೆಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವ ಸಲುವಾಗಿ ನಿಮ್ಮ ವಿದ್ಯಾ ಇಲಾಖೆಯಲ್ಲಿ ಕೆಲವು ಜೊನ್ಸ್‌ನ್ನು ಮಾಡಿ, ಅವರು ಏನೇನು ಮಾರ್ಗದರ್ಶನಗಳನ್ನು ನೀಡುತ್ತಾರೆ ಅದನ್ನು ವಿದ್ಯಾ ಸಂಸ್ಥೆಗಳವರು ಅನುಸರಿಸುವಂತೆ ಕ್ರಮ ತೆಗೆದುಕೊಳ್ಳುತ್ತೀರಾ ?

ಇನ್ನು ಎರಡನೆಯದಾಗಿ ಹೇಳುವುದಾದರೆ, ತಾವು ಈ ಕಡೆ ಕುಳಿತಿದ್ದಾಗ ಆಗಿನ ವಿದ್ಯಾ ಸಚಿವರಾದ ಶ್ರೀ ಸುಬ್ಬಯ್ಯ ಶೆಟ್ಟಿಯವರಿಗೆ ಪ್ರಶ್ನೆ ಹಾಕಿ ಶಾಲಾ ಕಾಲೇಜುಗಳಲ್ಲಿ ಅಡ್ಮಿಷನ್ ಸಿಕ್ಕಬೇಕಾದರೆ ಇಷ್ಟು ತೊಂದರೆಯಾಗುತ್ತಿದೆ, ಸರ್ಕಾರ ಏನು ಮಾಡುತ್ತಿದೆ ಎಂದು ಕೇಳುತ್ತಿದ್ದಿರಿ ? ಆದರೆ ಈಗ ತಾವು ಆ ಕಡೆ ಹೋಗಿದ್ದೀರಿ, ಅಲ್ಲದೆ ತಮಗೆ ಬಹಳ ಅನುಭವವಿದ್ದರೂ ಈ ವಿಚಾರದಲ್ಲಿ ಮೊದಲೇ ಕ್ರಮ ತೆಗೆದು ಕೊಳ್ಳುವುದನ್ನು ಬಿಟ್ಟು ಇಷ್ಟು ತಡವಾಗಿ ಏತಕ್ಕೆ ಸರ್ಕ್ಯುಲರ್ ಕಳಿಸಿಕೊಟ್ಟಿರಿ ? ಇದರಿಂದುಂಟಾಗತಕ್ಕ ತೊಂದರೆಯನ್ನು ತಪ್ಪಿಸಲು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಇನ್ನೂ ಮೂರನೆ ವಿಚಾರ ಎಂದರೆ, ಪ್ರತಿಯೊಂದು ಶಾಲೆಗಳಲ್ಲೂ ಬೆಟರ್‌ಮೆಂಟ್ ಕಮಿಟಿಗಳನ್ನು ಏನಿವೆ ಅವುಗಳಿಗೆ ನೀವು ಮಾರ್ಗದರ್ಶನ ನೀಡಿ ಮಕ್ಕಳಿಗೆ ಶಾಲಾ ಕಾಲೇಜುಗಳಲ್ಲಿ ಸುಲಭವಾಗಿ ಸೀಟು ಸಿಕ್ಕುವಂತೆ ಕ್ರಮ ತೆಗೆದುಕೊಂಡು ಮುಂದಿನ ವರ್ಷ ಈ ಕಷ್ಟವನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಬೇಕು. ಇಲ್ಲದೇ ಹೋದರೆ ನಾವು ಈ ಸದನದಲ್ಲೇ ಧರಣಿ ಕೂತುಕೊಳ್ಳುತ್ತೇವೆ. ಈ ವಿಚಾರ ದಲ್ಲಿ ತಮ್ಮ ಕಡೆಯಿಂದ ನಿರ್ದಿಷ್ಟವಾದ ಭರವಸೆ ಬರಲೇಬೇಕು. You must make an honest and determined effoat. You should not allow to grow grss under your feet. We want solid assurance from the Hou. Minister ; otherwise, we are going to take up this issue on a very large scale.

10-00 A.M.

ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೆ, ಡೊನೇಷನ್ನನ್ನ ನರ್ಸರಿ ಶಾಲೆಗಳಲ್ಲಿಯೂ ಸಹ ೩ ಸಾವಿರದಿಂದ ಹಿಡಿದು ೫ ಸಾವಿರ ರೂಪಾಯಿಗಳವರೆಗೆ ತೆಗೆದುಕೊಳ್ಳುತ್ತಿದ್ದಾರೆ. ಹೀಗೆ ತೆಗೆದುಕೊಳ್ಳುವ ಹಣವನ್ನು ಸರಿಯಾಗಿ ಸ್ಕೂಲಿಗೆ ವಿನಿಯೋಗ ಮಾಡುತ್ತಿದ್ದಾರೆಯೆ ? ಇಲ್ಲ ಮಕ್ಕಳು ಕುಳಿತು ಓದುವುದಕ್ಕೆ ಸರಿಯಾದ ಸ್ಥಳವನ್ನು ಒದಗಿಸುತ್ತಿಲ್ಲ. ಕಾರ್ ಗ್ಯಾರೇಜ್ ಮತ್ತು ಗುಡಿಸುಲುಗಳನ್ನು ಕಟ್ಟಿಕೊಂಡು ಮಕ್ಕಳಿಗೆ ಪಾಠ ಹೇಳುತ್ತಿರುತ್ತಾರೆ. ಮಕ್ಕಳಿಗೆ ಬೇಕಾದ ಸಲಕರಣೆಗಳನ್ನು ಒದಗಿಸುವುದಿಲ್ಲ ಈ ರೀತಿ ಆನ್‌ಏಡೆಡ್ ಸ್ಕೂಲುಗಳಲ್ಲಿ ನಡೆಯುತ್ತಿಗೆ. ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳುವುದಿಲ್ಲ ? ಇನ್ನು ಕಲವು ಸಂಸ್ಥೆಗಳಲ್ಲಿ ಯಾವ ಕ್ಯಾಸ್ಟ್-ಕ್ರೀಡ್ ಇಲ್ಲವೆಂದು ತಃವು ಹೇಳುತ್ತೀರಿ ಆದರೆ ಒಂದೊಂದು ಮಾನೇಜ್‌ಮೆಂಟ್ ಒಂದೊಂದು ಜಾತಿಗೆ ಸೇರಿದಂತಹ ಸಂಸ್ಥೆಗಳನ್ನು ಮಾಡಿಕೊಂಡಿರುತ್ತಾರೆ. ಅವರು ಅವರ ಜಾತಿಯವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಾರೆ. ಬೇರೆ ಜಾತಿಯವರು ಹೋದರೆ ಸೀಟು ಕೊಡುವುದಿಲ್ಲ, ಕೊಟ್ಟರೂ ಅವರಿಂದ ಜಾಸ್ತಿ ಡೊನೇಷನ್ ತೆಗೆದು ಕೊಳ್ಳುತ್ತಾರೆ. ಇದರ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ? ಎಲ್ಲಿ ಕ್ಯಾಸ್ಟ್-ಕ್ರೀಡ್ ಇಲ್ಲವೋ ಅಲ್ಲಿ ಮೆರಿಟ್‌ಗೆ ಏನಾದರೂ ಅವಕಾಶವಿದೆಯೋ ಇನ್ನು ಕೆಲವು ಸಂಸ್ಥೆಯವರು ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ಅಂದರೆ ಅವರ ಸಂಸ್ಥೆಗಳಲ್ಲಿ ಪಾಸ್ ಮಾಡಿದ ಮಕ್ಕಳಿಗೆ ಮೆರಿಟ್ ಇಲ್ಲದೆ ಇದ್ದರೂ ಅವರಿಗೆ ಮನ್ನಣೆ ಕೊಡುವಂತೆ ಏರ್ಪಾಡು ಮಾಡಬೇಕು. ಹಣ ಕೊಡುವವರಿಗೆ ಮೆರಿಟ್ ಬೇಕಾಗಿಲ್ಲ, ಅಂದರೆ ಕೆಲವು ಕಡೆ ಪರ್ಸಂಟೇಜ್ ಮೇಲೆ ಮೂರ ಸಾವಿರ, ಐದು ಸಾವಿರ ಹೀಗೆ ಹಣ ಕೊಡುವವರಿಗೆ ಸೀಟ್ ಸಿಕ್ಕುತ್ತದೆ. ಮತ್ತೊಂದು ವಿಷಯ ವೇನೆಂದರೆ ಕೆಲವು ಸಂಸ್ಥೆಗಳಲ್ಲಿ ಮೆಟ್ರಿಕ್ ಹಾಗೂ ಏನೇ ಸ್ಟ್ಯಾಂಡರ್ಡ್‌ಗಳಲ್ಲಿ ಒಮ್ಮೆ ಫೇಲಾಗಿ ಮುಂದಿನ ವರ್ಷಗಳಲ್ಲಿ ಪಾಸ್ ಆದರೂ ಅವರಿಗೆ ಆ ಸಂಸ್ಥೆಯ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡುವುದಿಲ್ಲ. ಇದರ ಬಗ್ಗೆ ಏನಾದರೂ ನಿರ್ದೇಶನ ಕೊಡುತ್ತೀರಾ ?

ಶ್ರೀ ಟಿ. ಚೌಡಯ್ಯ.—ಎಸ್ ಸಿ. ಮತ್ತು ಎಸ್.ಟಿ. ಯವರು ನಡೆಸತಕ್ಕ ಶಾಲೆಗಳಲ್ಲಿ ೫೦ ಪರ್ಸೆಂಟ್ ಅವರ ಮಕ್ಕಳಿಗೆ ಉಳಿದ ೫೦ ಪರ್ಸೆಂಟ್ ಬೇರೆಯವರ ಮಕ್ಕಳಿಗೆ ಸೀಟು ಕೊಡಬೇಕೆಂದು ಇದೆ ಆದೇ ರೀತಿ ಬೇರೆಯವರು ನಡೆಸುವ ಶಾಲೆಗಳಲ್ಲಿಯೂ ಎಸ್.ಸಿ ಮತ್ತು ಎನ್. ಟಿ. ಹಾಗೂ ಹಿಂದುಳಿದವರಿಗೆ ೨೦ ಪರ್ಸೆಂಟ್ ಆದರೂ ವಿಾಸಲಾತಿ ನಿಗದಿ ಮಾಡಿ ಅವರಿಂದ ಯಾವುದೇ ರೀತಿಯಿಂದ ಡೊನೇಷನ್ ತೆಗೆದು ಕೊಳ್ಳದೆ ಸೀಟು ಕೊಟ್ಟು ಫ್ರೀ ಎಜುಕೇಷನ್ ಕೊಡಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಅಧಕ್ಷರೆ, ನಾನು ಮೇಲಿಂದ ಮೇಲೆ ಈ ಸಭೆಯಲ್ಲಿ ಈ ವಿದ್ಯಾಭ್ಯಾಸದ ಬಗ್ಗೆ ಪ್ರಸ್ತಾಪ ಬಂದಾಗ ಈ ಎಲ್ಲಾ ತೊಂದರೆಗಳನ್ನು ನಿವಾರಿಸಲಿಕ್ಕೆ ಇದರ ಬಗ್ಗೆ ಒಂದು ಹೆತೋಟಿ ತರಬೇಕೆಂದು ಹೇಳಿದ್ದೇನೆ. ಆದರೆ ಈಗ ಇರುವ ಕಾನೂನಿನ ಪ್ರಕಾರ ನಮಗೆ ಬಲವಿಲ್ಲ. ಆದ್ದರಿಂದ ಇದಕ್ಕೆ ಒಂದು ಸಮಗ್ರವಾದ ಮಸೂದೆಯನ್ನು ತಂದು ಇವೆಲ್ಲಕ್ಕೂ ಒಂದು ಹತೋಟಿ ಮಾಡಲಿಕ್ಕೆ ಸಾಧ್ಯ. ಇದನ್ನು ಈ ಸಾರಿ ಅಧಿವೇಶನದ ಮುಂದೆಯೇ ತರುವ ಉದ್ದೇಶವಿದೆ. ನಾನು ಈ ಬಿಲ್ಲನ್ನು ತಯಾರಿಸುವಾಗ ಗಂಟೆಗಟ್ಟಲೆ ಕೂತು ಮಾಡಿದ್ದೇನೆ, ಆದಕ್ಕೆ ತಾವೇ, ಎಂದೂ ಆಗದೆ ಇರುವ ಕೆಲಸ ಮಾಡಿದ್ದೀರಿ ಎಂದು ಶಬಾಸ್‌ಗಿರಿ ಕೊಟ್ಟಿದ್ದೀರಿ ಈಗ ಏನು ಒಂದು ಮಸೂದೆಯನ್ನು ತರಬೇಕೆಂದಿದ್ದೇವೆ ಅದು ಈ ಸದನದ ಅಂಗೀಕೃತ ಪಡೆದ ಮೇಲೆ ಎಲ್ಲಾ ತೊಂದರೆಗಳು ಮತ್ತು ಅನ್ಯಾಯಗಳಿಗೆ ತಡೆ ಬರುತ್ತದೆ. ಈ ರೀತಿಯ ತೊಂದರೆ ಇರುವುದು ಹೆಚ್ಚಾಗಿ ನಮ್ಮ ಬೆಂಗಳೂರು ನಗರದಲ್ಲಿ ಮಾತ್ರ. ನಾನು ಧಾರವಾಡ, ಮೈಸೂರು, ಮಂಗಳೂರು ಮತ್ತು ಇನ್ನೂ ಕೆಲವು ಕಡೆ ಹೋಗಿದ್ದೆ, ಅಲ್ಲಿ ಈ ರೀತಿಯ ತೊಂದರೆಗಳು ಕಾಣಲಿಲ್ಲ.

ಶ್ರೀ ಎಂ. ಸಿ. ನಾನಯ್ಯ.—ಇದು ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ, ನಮ್ಮ ಚಿಕ್ಕ ಪಟ್ಟಣವಾದ ಮಡಿಕೇರಿಯಲ್ಲಿಯೂ ಸಹ ಇದೇ ರೀತಿ ಡೋನೇಷನ್ ಪದ್ಧತಿ ಇದೆ. ಈ ವಿಷಯ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಬಂದಿರಲಿಕ್ಕೆ ಸಾಧ್ಯ. ಕೆಲವು ಪತ್ರಿಕೆಗಳಲ್ಲಿಯೂ ಬಂದಿದೆ. ಅಲ್ಲಿನ ಪ್ರೋಷಕರ ಕಷ್ಟ ಹೇಳತೀರದು ಕೆಲವು ಕಡೆ ಅಡ್ಮಿಷನ್ ಕ್ಲೋಸ್ ಎಂದು ಹೇಳುತ್ತಾರೆ. ಆದ್ದರಿಂದ ತಾವು ಮಸೂದೆಯನ್ನು ತರುವಾಗ ಕೇವಲ ಬೆಂಗಳೂರನ್ನು ಮಾತ್ರವೇ ಅಲ್ಲ, ಇಡೀ ಕರ್ನಾಟಕದ ಎಲ್ಲಿ ಪಟ್ಟಣಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕೆಂದು ಹೇಳುತ್ತೆನೆ.

SRI B. B. SAYANAK.—Sir, in Belgaum also that is the problem. In Homeopathy Midical College, they are collecting Rs. 15 000 and for diploma course Rs. 10,000 For Medical College seats they are taking Rs. one lakh and Rs. 50,000 for ngineering College seat ; copitation fee Rs. 15,000 and building fund Rs. 10,000 and even in Mission's Schoolalso they are collecting money This is not theproblem pertaining to Bangalore only. This is the problem facing throughout the State.

ಅಧ್ಯಕ್ಷರು.—ಇದು ಕಾಲಿಂಗ್ ಅಟೆನ್‌ಷನ್. ಈ ರೀತಿ ಎಲ್ಲಾ ಸದಸ್ಯರು ಇದರ ಮೇಲೆ ಮಾತ ನಾಡಲಿಕ್ಕೆ ಪ್ರಾರಂಭ ಮಾಡಿದರೆ ಹೇಗೆ ?

ಒಬ್ಬ ಮಾನ್ಯ ಸದಸ್ಯರು.—ಇದು ಬೆಂಗಳೂರಿಗೆ ಸೀಮಿತವಾಗಿದೆ ಎಂದು ಹೇಳಿದ್ದಕ್ಕೆ ನಾವೆಲ್ಲಾ ಇದನ್ನು ಹೇಳಬೇಕಾಯಿತು.

ಶ್ರೀ ಜಿ. ಬಿ. ಶಂಕರ್‌ರಾವ್.—ಬೇರೆ ಕಡೆಯಲ್ಲಿಯೂ ಇದ್ದರೆ ನಾನು ಉತ್ತರ ಕೊಡುತ್ತೇನೆ. ಮಾನ್ಯ ಅಧ್ಯಕ್ಷರು ಓಪ್ಪುವುದಾದರೆ. ಮಾನ್ಯ ಸದಸ್ಯರುಗಳೆಲ್ಲರ ಪ್ರಶ್ನೆಗಳಿಗೂ ಉತ್ತರ ಕೊಡಬೇಕಾದರೆ ಬಹಳ ದೀರ್ಘವಾದ ಉತ್ತರವಾಗುತ್ತದೆ ಇನ್ನು ಒಂದೆರಡು ದಿವಸಗಳಲ್ಲಿ ಈ ಇಲಾಖೆಯ ಮೇಲೆ ಚರ್ಚೆ ಬರುತ್ತದೆ, ಆ ಸಮಯದಲ್ಲಿ ಎಲ್ಲರ ಪ್ರಶ್ನೆಗಳಿಗೂ ಉತ್ತರ ಕೊಡಬಹುದು . ಮಾನ್ಯ ಸದಸ್ಯರು ಮಧ್ಯೆ ಮಧ್ಯೆ ಪ್ರಶ್ನೆ ಕೇಳಿದರೆ ಉತ್ತರ ಕೊಡಲಿಕ್ಕೆ ತೊಂದರೆಯಾಗುತ್ತದೆ. ಇಲ್ಲಿ ಕೆಲವರು ಶ್ರೀಮಂತರು ಮತ್ತು ಪ್ರತಿಷ್ಠಿತ ವ್ಯಕ್ತಿಗಳು ಸಂಸ್ಥೆಗಳನ್ನು ಮಾಡಿಕೊಂಡಿದ್ದಾರೆ ಅವುಗಳಿಂದ ಸಮಾಜಕ್ಕೆ ತೊಂದರೆಯಾದರೂ ಸರಿ ಅವರು ಅದನ್ನು ಗಣನೆಗೆ ತೆಗೆದುಕೊಳ್ಳದೆ ಒಂದು ವ್ಯವಸ್ಥಿತ ರೀತಿಯಲ್ಲಿ ಸಂಸ್ಥೆಗಳನ್ನು ನಡೆಸಿ ಕೊಂಡು ಬರುತ್ತಿದ್ದಾರೆ. ಆದ್ದರಿಂದ ಈ ವ್ಯವಸ್ಥೆಯನ್ನು ಬದಲಾಯಿಸುವುದಕ್ಕೆ ಕಷ್ಟವಾಗುತ್ತಿದೆ. ಇದು ಪ್ರಾಥಮಿಕ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಿಗೆ ನಡೆಯುತ್ತಿದೆ ಎಂದು ಅನೇಕ ಮಂದಿ ಮಾನ್ಯ ಸದಸ್ಯರು ಗಳು ಇನ್ನು ಕೆಲವರಲ್ಲಿ ಇಂಗ್ಲೀಷ್ ವ್ಯಾಮೋಹ ಇರುವುದರಿಂದ ಇಂಥ ಖಾಸಗೀ ಶಾಲೆಗಳಿಗೆ ಹಚ್ಚಿಗಿ ಪ್ರೋತ್ಸಾಹ ಕೊಡುತ್ತಿದ್ದಾರೆಂದು ಹಿಂದುಳಿದವರು ಕೂಡ ಹೇಳುತ್ತಾರೆ ಬರೀ ಶ್ರೀಮಂತರ ಮಕ್ಕಳೇ ಇಂಗ್ಲೀಷ್ ಓದಬೇಕೆ ? ನಮ್ಮ ಮಕ್ಕಳು ಇಂಗ್ಲೀಷ್ ಓದಬಾರದೇ ಎನ್ನುವ ಪ್ರಶ್ನೆ ಕೂಡ ಬಂದಿದೆ ಆದ್ದರಿಂದ ಇದನ್ನು ಬಗೆಹರಿಸುವುದು ಕಷ್ಟವಾಗಿದೆ. ಇನ್ನು ಇಂಜನೀಯರಿಂಗ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಫೀ ವಿಪರೀತವಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಇಂಜನಿಯರಿಂಗ್ ಕಾಲೇಜುಗಳಿಗಾಗಿ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಖಾಸಗಿಯವರು ಇಂಜಿನಿಯರಿಂಗ್ ಕಾಲೇಜನ್ನು ತೆರೆಯುವುದಕ್ಕೆ ಸರ್ಕಾರದವರು ಅನುಮತಿಯನ್ನು ಕೊಟ್ಟರೆ ಕ್ಯಾಪಿಟೇಷನ್ ಫೀಜನ್ನು ವಸೂಲು ಮಾಡುವುದಕ್ಕೆ ಅವರಿಗೆ ಅನುಮತಿ ಯನ್ನು ಕೊಡಬೇಕಾಗುತ್ತದೆ. ಇನ್ನು ಮುಂದೆ ಖಾಸಗಿಯವರಿಗೆ ಇಂಜನಿಯರಿಂಗ್ ಕಾಲೇಜುಗಳನ್ನು ತೆರೆಯುವುದಕ್ಕೆ ಅನುಮತಿಯನ್ನು ಕೊಡಬೇಕು ಎಂದರೆ ಹಾಲಿ ಇರತಕ್ಕೆ ಬಹಳಷ್ಟು ಇಂಜನಿಯರಿಂಗ್ ಕಾಲೇಜುಗಳನ್ನು ಮುಚ್ಚಬೇಕಾಗುತ್ತದೆ ಇಂಜನಿಯರಿಂಗ್ ಕಾಲೇಜುಗಳಲ್ಲಿ ಶ್ರೀಮಂತರ ಮಕ್ಕಳಿಗೆ ಮಾತ್ರ ಪ್ರವೇಶ ಸಿಕ್ಕುತ್ತಿದೆ, ಬಡವರ ಮಕ್ಕಳಿಗೆ ಸೀಟು ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಇಂಜನಿಯರಿಂಗ್ ಕಾಲೇಜುಗಳನ್ನು ತೆರೆಯುವ ಬಗ್ಗೆ ಪರವಾಗಿಯೂ ಹೇಳುತ್ತಾರೆ ವಿರೋಧವಾಗಿಯೂ ಹೇಳುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಈ ಬಗ್ಗೆ ಸಹಕರಿಸಿದರೆ ಖಂಡಿತವಾಗಿಯೂ ನಾನು ನಿಯಂತ್ರಣ ತರುತ್ತೇನೆ. ಬಹುಮಟ್ಟಿಗೆ ತಮ್ಮ ಸಹಕಾರ ಇದ್ದರೆ ೧೦೦ಕ್ಕೆ ೯೯ ಭಾಗ ಖಾಸಗಿ ಸಂಸ್ಥೆಯ ಆಡಳಿತ ಮಂಡಲಿಯವರು ತಪ್ಪು ಮಾಡಿದಾಗ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಂಡು ಅವರನ್ನು ಜೈಲಿಗೆ ಕಳುಹಿಸುವುದಕ್ಕೂ ಈ ಒಂದು ಮಸೂದೆಯಲ್ಲಿ ನಾನು ಅವಕಾಶ ಮಾಡಿಕೊಡುತ್ತೇನೆ. ಅದಕ್ಕೆ ತಾಳ್ಮೆಯಿಂದ ತಾವು ನನಗೆ ಅವಕಾಶ ಮಾಡಿಕೊಡಬೇಕು ಈಗ ನೂರಾರು ಮಂದಿ ಮಾನ್ಯ ಸದಸ್ಯರು ನನ್ನನ್ನು ಭೇಟಿ ಮಾಡಿ ನನಗೆ ಕೆಲಸ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ ಆದ್ದರಿಂದ ಸ್ವಲ್ಪ ದಯಮಾಡಿ ನನಗೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ನಾನು ತಯಾರು ಮಾಡಿರತಕ್ಕ ಮಸೂದೆಯನ್ನು

ಈ ಸಭೆಯಲ್ಲಿ ಮಂಡಿಸಿ ಪಾಸು ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಸಣ್ಣ ಪುಟ್ಟ ಕೆಲಸಗಳಿಗೆ ಬರಬೇಡಿ.

ಡೊನೇಷನ್ ಕೊಡುವ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನರ್ಸರಿ ಸ್ಕೂಲುಗಳಿಗೆ ಕೂಡ ಡೊನೇಷನ್ ಕೊಡುವ ವಿಚಾರವನ್ನು ಹೇಳಿದ್ದಾರೆ. ಈಗ ನಾನು ಹೇಳಿದ ಕಾನೂನು ಜಾರಿಗೆ ಬಂದರೆ ಅದನ್ನೆಲ್ಲಾ ತಡೆಗಟ್ಟಬಹುದು. ಮಕ್ಕಳನ್ನು ಸ್ಕೂಲುಗಳಿಗೆ ಸೇರಿಸಬೇಕಾದರೆ ನಾವು ದುಡ್ಡು ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ತನಿಖೆಗೆ ಬಂದಾಗ ನಾವು ದುಡ್ಡು ಕೊಟ್ಟಿದ್ದೇವೆ ಎಂದು ಹೇಳುವುದಕ್ಕೆ ಯಾರೂ ತಯಾರು ಇಲ್ಲ. ಅವರಿಗೆ ಮುರ್ಕಾದೆ ಹೋಗುತ್ತದೆ ಎಂದು ತನಿಖೆಗೆ ಕಳುಹಿಸಿದರೆ ದುಡ್ಡು ಕೊಟ್ಟದ್ದಕ್ಕೆ ಪುರಾವೆ ಸಿಕ್ಕುವುದಿಲ್ಲ. ಸಾಕ್ಷಿ ಸಿಕ್ಕುವುದಿಲ್ಲ. ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನ ಆಧಾರ ಇರುವುದಿಲ್ಲ. ಪುರಾವೆ ಮೇಲೆ ಯಾರಾದರೂ ಪೇಪರ್‌ನಲ್ಲಿ ಬರೆದುಕೊಟ್ಟರೆ ದುಡ್ಡು ತೆಗೆದುಕೊಂಡವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಪುರಾವೆ ಇಲ್ಲದಿದ್ದರೆ ಅವರ ದೂಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ ನಿಗದಿಯಾಗಿ ಇಂತಿಂಥಾ ಕಡೆ ಇಂತಿಂಥವರು ದುಡ್ಡು ತೆಗೆದುಕೊಂಡಿದ್ದಾರೆ ಎಂದು ಮಾನ್ಯ ಸದಸ್ಯರು ಬರೆದುಕೊಟ್ಟರೆ ಅದನ್ನು ತನಿಖೆ ಮಾಡಿಸಿ ಅವರನ್ನು ಯಾವ ರೀತಿ ಶಿಕ್ಷಾರ್ಹರನ್ನಾಗಿ ಮಾಡಬೇಕೋ ಆ ರೀತಿ ಮಾಡಬಹುದು. ನಾನು ಒಬ್ಬ ಲಾಯರ್. ನನಗೂ ಕಾನೂನು ಚೆನ್ನಾಗಿ ಗೊತ್ತಿದೆ. ಈಗ ಮಾನ್ಯ ಸದಸ್ಯರು ಏನು ಹೇಳಿದರು ಅದರಲ್ಲಿ ಸತ್ಯಾಂಶ ಇಲ್ಲ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಸತ್ಯಾಂಶ ಇದೆಯೆಂದು ತಾವೇ ಹೇಳುವುದಕ್ಕೆ ಹಿಂದೆ ಮುಂದೆ ನೋಡುತ್ತೀರಿ. ನನಗೆ ಸ್ವಲ್ಪ ಕಾಲಾವಕಾಶವನ್ನು ಕೊಟ್ಟರೆ ಈ ಬಗ್ಗೆ ಒಂದು ಸಮಗ್ರ ವಂಸೂದೆಯನ್ನು ತಂದು ಪಾಸು ಮಾಡಿಕೊಂಡು ಇದಕ್ಕೆ ಪರಿಹಾರವನ್ನು ಒದಗಿಸುತ್ತೇನೆ ಎಂದು ಭರವಸೆಯನ್ನು ಕೊಡುತ್ತೇನೆ. ಆ ಕಾನೂನು ಜಾರಿಗೆ ಬಂದ ಮೇಲೆ ಇಂಥಾ ತಪ್ಪುಗಳು ೧೦೦ಕ್ಕೆ ೯೦ ರಷ್ಟು ಆಗದ ಹಾಗೆ ನೋಡಿಕೊಳ್ಳುತ್ತೇನೆ.

MATTER UNDER RULE 312

Re: Revising the list of SC/ST Candidates for probationary class I and class II Posts.

† SRI C.M. ARUMUGAM.—(K G.F.) Sir. the Government have issued an order on 4th March, 1977 on the basis of the Havanoor Commission Report, including certain castes and communities as backward classes and making reservation for them. There were about 16 backward communities, 129 backward classes and 62 Tribes. There is also a Special Group mostly consisting of artisans, petty businessmen, engaged in some occupations involving manual labour and persons holding an appointment in Government or private concerns. The Government were pleased to make reservations for Scheduled Castes and Scheduled Tribes as defined in the Constitution, *i. e.*, 15% and 3% respectively. The Government were also pleased to make reservations for the Backward Communities (20%), Backward Castes (10%) and Special Group (3%). Along with this, the Government also directed the authorities making recruitments to follow these reservations strictly.

The Government also directed the authorities to follow the roster attached to the G. O. of 4th March 1977 according to which the first vacancy should have gone to General Merit and the second to the